**ಓ.ಎಸ್. ನಂ. 287/2018        ಪಿ.ಡಬ್ಲೂ-1        ಹೆಸರು – ಸಿದ್ದಪ್ಪ**

**ಸಾಕ್ಷಿಯನ್ನು ದಿನಾಂಕಃ 18/08/2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ಶ್ರೀ. ಎಂ.ಬಿ.      ವಾದಿ ಪರ ವಕೀಲರಿಂದಃ-**

ಗ್ರಾಮ ಲೆಕ್ಕಾಧಿಕಾರಿ ನೀಡಿರುವ ದೃಡೀಕರಣ ಪತ್ರವನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅಟ್ಲಾಸ್ ನಕಲನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ರಾಜಸ್ವ ನಿರೀಕ್ಷಕರ ಮಹಜರ್ ನ ದೃಡೀಕೃತ ನಕಲನ್ನು ಅನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಅಸಲು ದಾವಾ ಸಂಖ್ಯೆ 177/1995 ರ ವಾದ ಪತ್ರ , ಪ್ರತಿವಾದ ಪತ್ರ , ವಿವಾದಾಂಶ , ತೀರ್ಪು ಮತ್ತು ಡಿಕ್ರಿಯ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ-4 ರಿಂದ ನಿಪಿ-8 ಎಂದು ಗುರುತಿಸಲಾಯಿತು. ಆರ್.ಎ ನಂಬರ್ 40/2000 ದ ತೀರ್ಪು ಮತ್ತು ಡಿಕ್ರಿಯನ್ನು ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ-9 ಮತ್ತು ನಿಪಿ-10 ಎಂದು ಗುರುತಿಸಲಾಯಿತು. ನನ್ನ ವಕೀಲರಿಂದ ಪ್ರತಿವಾದಿಗೆ ಕಳುಹಿಸಿಕೊಟ್ಟಿದ್ದ ಕಾನೂನು ತಿಳುವಳಿಕೆ ಪತ್ರದ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ಆರ್.ಆರ್.ಟಿ ಪ್ರಕರಣದ ನೋಟೀಸ್ ಅನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ರಾಜಸ್ವ ನಿರೀಕ್ಷಕರ ದಿನಾಂಕ 28.02.1996 ರ ಮಹಜರ್ ನ ದೃಡೀಕೃತ ನಕಲನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-14 ಎಂದು ಗುರುತಿಸಲಾಯಿತು. ಅಸಲು ದಾವಾ ಸಂಖ್ಯೆ 177/1995 ರಲ್ಲನ ನ್ಯಾಯಾಲಯದ ನಿಯೋಗಿ ವರದಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-15 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ. ಆರ್.ಎನ್.ಎನ್. ಪ್ರತಿವಾದಿ ಪರ ವಕೀಲರಿಂದಃ-**

ಈ ದಾವೆಯನ್ನು ಖಾಲಿ ಜಾಗಕ್ಕೆ ಸಂಬಂಧಿಸಿದಂತೆ ಹಾಕಿದ್ದೇನೆ. ದಾವಾ ಸ್ವತ್ತಿನ ಪೂರ್ವಕ್ಕೆ ಕೆಂಪಶೆಟ್ಟಿಯವರ ಖಾಲಿ ಜಾಗ, ಪಶ್ಚಿಮಕ್ಕೆ ಸಣ್ಣಶೆಟ್ಟಿರವರ ಖಾಲಿ ಜಾಗ, ಉತ್ತರಕ್ಕೆ ನಂಜನಗೂಡು ಹುಲ್ಲಹಳ್ಳಿ ರಸ್ತೆ, ದಕ್ಷಿಣಕ್ಕೆ ಪ್ರತಿವಾದಿಯ ಖಾಲೀ ನಿವೇಶನ. ದಾವಾ ಸ್ವತ್ತಿನ ವಿಸ್ತೀರ್ಣ 3 ಗುಂಟೆ. ದಾವಾ ಸ್ವತ್ತಿನ ದಾಖಲಾತಿ ಪಹಣಿ ಪತ್ರಿಕೆಯಲ್ಲಿ ನಮೂದಾಗಿದೆಯೋ ಅಥವಾ ಗ್ರಾಮ ಪಂಚಾಯಿತಿಯ ತೆರಿಗೆ ನಿರ್ಧರಣ ಪಟ್ಟಿಯಲ್ಲಿ ಬರುತ್ತಿದೆಯೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 2 ರಲ್ಲೂ ಬರುತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಮೂಲತಃ ಸರ್ಕಾರಕ್ಕೆ ಸೇರಿತ್ತು. ಸಣ್ಣಶೆಟ್ಟಿ, ಕೆಂಪಶೆಟ್ಟಿ ಮತ್ತು ಪ್ರತಿವಾದಿಯೂ ಯಾರಿಂದ ಖಾಲಿ ಜಾಗವನ್ನು ಖರೀದಿಸಿದರು ಎಂದು ನನಗೆ ಗೊತ್ತಿಲ್ಲ. ನಾನು ಸ್ವದೀನದಲ್ಲಿ ಇರುವ 3 ಗುಂಟೆ ಸ್ವತ್ತು ಸರ್ಕಾರಿ ಜಾಗ ಆಗಿರುವುದರಿಂದ ಅದಕ್ಕೆ ಯಾವುದೇ ಸರ್ವೆ ನಂಬರ್ ಇಲ್ಲ. ನನ್ನ ವಾದ ಪತ್ರದ ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತಿನ ವರ್ಣನೆ ಸರಿ ಇದೆ. ಸರ್ವೆ ನಂಬರ್ 436/1 ಬಿ ರ ಒಟ್ಟು ವಿಸ್ತೀರ್ಣ

ನನಗೆ ಗೊತ್ತಿಲ್ಲ. ವಾದ ಪತ್ರದ ಖಂಡಿಕೆ 2 ರಲ್ಲಿನ ಸಂಗತಿಗಳು ಸರಿ ಇದೆ. ಸರ್ವೆ ನಂಬರ್ 436/1 ಬಿ ರಲ್ಲಿನ ಜಮೀನು ಆಶ್ರಯ ಮನೆ ಹಂಚಿಕೆ ಮಾಡಲು ಸ್ವಾಧೀನಪಡಿಸಿಕೊಳ್ಳಲಾಗಿದೆ. ಆಶ್ರಯ ಮನೆ ಪಡೆದವರು ಅವರ ಸ್ವತ್ತುಗಳಿಗೆ ಅಸಸ್ ಮೆಂಟ್ ನಂಬರ್ ಪಡೆದು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸರ್ವೆ ನಂಬರ್ 436/1 ಬಿ ರಲ್ಲಿನ 2 ಎಕರೆ 17 ಗುಂಟೆ ಜಮೀನು ಬಿಟ್ಟು ಸದರಿ ಜಮೀನ ಉತ್ತರ ದಿಕ್ಕಿಗೆ ಬರುತ್ತದೆ. ದಾವಾ ಸ್ವತ್ತಿನಲ್ಲಿ ದನದ ಕೊಟ್ಟಿಗೆ ಇದೆ ಮತ್ತು ಹುಲ್ಲಿನ ಮೆದೆಗಳು ಇವೆ ಎಂದು ತೋರಿಸಲು ಫೋಟೋಗಳನ್ನು ಹಾಜರುಪಡಿಸಿಲ್ಲ. ಪ್ರತಿವಾದಿಯು ಅಸಲು ದಾವಾ ಸಂಖ್ಯೆ 177/1995 ಅನ್ನು ದಾವಾ ಸ್ವತ್ತು ತನಗೆ ಸೇರಬೇಕು ಎಂದು ಸಲ್ಲಿಸಿದ್ದರು. ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಸ್ವಲ್ಪ ಭಾಗವನ್ನು ಒತ್ತುವರಿ ಮಾಡಿದ್ದಾರೆ. ಪ್ರತಿವಾದಿಯು ನನ್ನ ಜಾಗವನ್ನು ಒತ್ತುವರಿ ಮಾಡಿಕೊಂಡು ಮಳಿಗೆ ಕಟ್ಟಿದ್ದಾರೆ. ಮಳಿಗೆ ಮುಂಭಾಗದ ಜಾಗದಲ್ಲಿ ವಾಹನ ನಿಲುಗಡೆಗೆ ಸಿಮೆಂಟ್ ಹಾಕಿ ಮಟ್ಟ ಮಾಡಿಸಿದ್ದಾರೆ. ಪ್ರತಿವಾದಿಯು ಸಿಮೆಂಟ್ ಹಾಕಿ ಮಟ್ಟ ಮಾಡಿರುವ ಜಾಗದ ಉತ್ತರಕ್ಕೆ ಪೂರ್ವ-ಪಶ್ಚಿಮವಾಗಿ ಚರಂಡಿ ಮಾಡಿದ್ದಾರೆ ಎಂದರೆ ಸಾಕ್ಷಿಯು ರಸ್ತೆ ಪಕ್ಕ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯನ್ನು ಅಗಲೀಕರಣ ಮಾಡುವಾಗ ಅಕ್ಕಪಕ್ಕದ ಸರ್ಕಾರಕ್ಕೆ ಸಂಬಂಧಪಟ್ಟ ಕಟ್ಟಡಗಳನ್ನು ಮತ್ತು ಅಕ್ರಮವಾಗಿ ಕಟ್ಟಿಕೊಂಡ ಕಟ್ಟಡಗಳನ್ನು ತೆರವುಮಾಡಿಸಿದ್ದರು ಎಂದರೆ ಸರಿಯಲ್ಲ. ರಸ್ತೆ ಅಗಲೀಕರಣ ಮಾಡುವಾಗ ಸಣ್ಣಶೆಟ್ಟಿರವರ ಮನೆಯ ಮುಂಭಾಗದ ಸ್ವಲ್ಪ ಭಾಗವನ್ನು ತೆರವುಗೊಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.
( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**